ನೀರು ಹಾಕಿ ಕ್ಷಣದಲ್ಲಿ ನೀರು ಕುಡಿದ ನೆಲಹಾಸಿನ ಮೇಲೆ ಆಕಾಶದ ನಕ್ಷತ್ರ ಎಣಿಸುತ್ತಾ ಮಲಗುತ್ತಿದ್ದರು. ಆಗೆಲ್ಲಾ ಇಷ್ಟೊಂದು ಕಳ್ಳತನ, ಅತ್ಯಾಚಾರ ಇರಲಿಲ್ಲ. ಹೀಗಿರುವಾಗಲೇ ವರ್ಷಕ್ಕೆ ಒಂದು ವಾರ ಸಣ್ಣದಾಗಿ ಮಳೆ ಬಿದ್ದರೆ, ಪುಟ್ಟವರಾಗಿದ್ದ ನಾವೆಲ್ಲರೂ ಬೀದಿಗೆ ಬಂದು ಮಳೆಯಲ್ಲಿ 'ಬಾರೋ ಬಾರೋ ಮಳೆರಾಯ ಭೂಮಿಯ ತೋಟಕೆ ನೀರಿಲ್ಲ...' ಎಂದು ಕುಣಿದು ಕುಪ್ಪಳಿಸುತ್ತಿದ್ದೆವು. ನಮಗೆ ಅಲ್ಲಿ ಬಿಸಿಲಿಗೂ ಕೂಡ ಛತ್ರಿ ಹಿಡಿಯುವ ಪ್ರಮೇಯವೇ ಬಂದಿರಲಿಲ್ಲ. ಹೀಗೆ ನಾನು, ನನ್ನಣ್ಣ, ತಂಗಿ ತಟ್ಟಿ ಶಾಲೆಯಲ್ಲಿ ಓದಿ, ಸರ್ಕಾರಿ ಕಾಲೇಜಿನ ಪಿಯುಸಿ ತನಕಾ ಕಲಿತೆವು. ನನ್ನಪ್ಪನಿಗೆ ಇನ್ನು ಗಂಗಾವತಿಯಲ್ಲಿ ಪಶು ವೈದ್ಯಕೀಯ ಇಲಾಖೆಯಲ್ಲಿ ಉನ್ನತವಾದ ಹುದ್ದೆ ಇರಲಿಲ್ಲವಾದ್ದರಿಂದ ಅನಿವಾರ್ಯವಾಗಿ ನಾವು ಚಿಕ್ಕಮಗಳೂರಿಗೆ ಬರಲೇಬೇಕಾಯಿತು.

ಹಾಗೆ ಮೂರು ವರ್ಷಕ್ಕೊಮ್ಮೆ ಟ್ರಾನ್ಸ್‌ಫರ್ ಆಗುತ್ತಿದ್ದ ನಮ್ಮಪ್ಪನನ್ನು ಗಂಗಾವತಿಯ ಜನ ಮಂತ್ರಿಗಳಿಗೆ ಹೇಳಿ, ಎಂ.ಎಲ್.ಎ., ಎಂ.ಪಿಗಳಿಗೆ ಹೇಳಿ ಟ್ರಾನ್ಸ್‌ಫರ್ ಅನ್ನು ಕ್ಯಾನ್ಸಲ್ ಮಾಡಿಸುತ್ತಿದ್ದರು. ಆದರೆ, ಈಗ ಅಪ್ಪನಿಗೆ ಪ್ರಮೋಷನ್ ಸಿಕ್ಕಿದ್ದರಿಂದ ಅಲ್ಲಿ ಗಂಗಾವತಿಯಲ್ಲಿ ಅಂತಹ ಹುದ್ದೆ ಇಲ್ಲದ್ದರಿಂದ ಜಿಲ್ಲಾ ಕೇಂದ್ರವಾದ ಚಿಕ್ಕಮಗಳೂರಿಗೆ ಅಪ್ಪ ಬರಲೇಬೇಕಾಯಿತು. ನಾವು ಕೂಡ ಭಾರವಾದ ಮನಸ್ಸಿನಿಂದ ಬಿಟ್ಟು ಬಂದೆವು. ನಮಗೂ ಕೂಡ ಅದು ನಮ್ಮದೇ ಊರೆಂದು ಅನಿಸಿ ಕಣ್ಣು ತೇವ ಮಾಡಿಕೊಂಡೇ ಗೆಳೆಯರನ್ನು ಬಿಟ್ಟು ಚಿಕ್ಕಮಗಳೂರಿಗೆ ಬಂದದ್ದು.

ಅಪ್ಪನಿಗೆ ಈಗ ಜಿಲ್ಲೆಯ ಉಸ್ತುವಾರಿ. ನಮಗೂ ಮನೆ ಮುಂದೆ ಒಂದೆರಡು ಜೀಪುಗಳು ಬಂದು ನಿಲ್ಲುವ ಗತ್ತು. ಹೊಸ ಮನೆಯಲ್ಲಿ ಚಿಕ್ಕಮಗಳೂರಿನ ವಾಸ. ಗಂಗಾವತಿಯ ಸರ್ಕಾರಿ ಮನೆಯಲ್ಲಿ ಇಲ್ಲದ ಸೌಲಭ್ಯ ಚಿಕ್ಕಮಗಳೂರಿಗೆ ಬಂದಾಗ ಅದೆಂಥದ್ದೋ ಖುಷಿಯಲ್ಲಿ ನಾವು ಹೊಂದಿಕೊಳ್ಳಲಾರಂಭಿಸಿದೆವು. ನಾವು ಚಿಕ್ಕಮಗಳೂರಿಗೆ ಬಂದಾಗ ಅದು ಆಗ ತಾನೇ ಮಳೆ ನಿಂತು ಚಳಿಗಾಲಕ್ಕೆ ಕಾಲಿಟ್ಟಂತಹ ಕಾಲ. ನಾವು ಅಂತಹ ಚಳಿಯನ್ನು ನಮ್ಮ ಜೀವನದಲ್ಲೇ ನೋಡಿರಲಿಲ್ಲ. ಗಂಗಾವತಿಯ ಬಿಸಿಲೆಲ್ಲಿ? ಚಿಕ್ಕಮಗಳೂರಿನ ಚಳಿಯೆಲ್ಲಿ? ಎಂದೂ ಕಾಲಿಗೆ ಸಾಕ್ಸ್ ಹಾಕದ, ಸ್ವೆಟರ್‌ಗಳನ್ನು ಹಾಕದ ನಾವು ಅವೆಲ್ಲವನ್ನು ಕೊಂಡು ತಂದು ಹೊಸ ಕಾಲಮಾನಕ್ಕೆ ಹೊಂದಿಕೊಳ್ಳಲಾರಂಭಿಸಿದೆವು. ನಿಜಕ್ಕೂ ಅದೊಂದು ಹೊಸ ಪ್ರಯತ್ನವೇ. ನಾವು ಬಿರು ಬೇಸಿಗೆಯಿಂದ ಹಿಮಾಲಯದ ತಪ್ಪಲಿಗೆ ಬಂದಂತಹ ಅನುಭವ. ಅದೆಷ್ಟು ಶಾಪ ಹಾಕಿದೆವೋ ಚಿಕ್ಕಮಗಳೂರಿಗೆ ಗೊತ್ತಿಲ್ಲ. ನಾವ್ಯಾರೂ ಹೊಸದರಲ್ಲಿ ಸೋಫಾ ಬಿಟ್ಟು ಕಾಲನ್ನು ನೆಲಕ್ಕೆ ಊರುತ್ತಲೇ ಇರಲಿಲ್ಲ. ಅಂತಹ ಚಳಿ ನಮ್ಮ ಚರ್ಮದ ಸಂಗಾತಕ್ಕೆ ಬಂದಿರಲೇ ಇಲ್ಲ.

ಚಳಿಗಾಲ ಕಳೆದು ಮಳೆ ಪ್ರಾರಂಭವಾಗುತ್ತಿದ್ದಂತೆ ನಮಗೆ ನಿಜಕ್ಕೂ ಮಲೆನಾಡಿನ ಮಳೆಯ ಅನುಭವ ಮೊದಲ ಬಾರಿ ನೋಡಿದ್ದು. ನನಗೆ ಇನ್ನೂ ಚೆನ್ನಾಗಿ ನೆನಪಿದೆ, ಆ ದಿನ ನಾನು ಪದವಿ ಕಾಲೇಜಿಗೆ ಹೋಗಿ ಬಿ.ಎ.ಗೆ ಅಡ್ಮಿಷನ್ ಮಾಡಿಸಿ ಬರುತ್ತಿದ್ದೆ. ಸಣ್ಣಗೆ ಮಳೆ ಶುರುವಾಯಿತು. ಖುಷಿಯಲ್ಲಿ ಮಳೆಗೆ ಕೈ ಆಲಿಸಿ, ಬಾನಿಗೆ ಬಾಯಿಬಿಟ್ಟು ಮಳೆಯ ನೀರನ್ನು ಆಪೋಷಣೆ ಮಾಡುತ್ತಲೇ ಮನೆಗೆ ಬಂದಿದ್ದೆ. ಅಮ್ಮ ಮಳೆಯಲ್ಲಿ ನೆನೆದು ಬಂದದ್ದಕ್ಕೆ ಕೋಪಗೊಂಡಿದ್ದಳು. ಆದರೆ ನಾನು ಅಂತಹ ಮಳೆಯನ್ನು ಜೀವನದಲ್ಲಿ ಅದೇ ಮೊದಲು ಕಂಡದ್ದು. ನಮಗೆಲ್ಲರಿಗೂ ಪ್ರಾರಂಭವಾದ ಮಳೆಯ ಖುಷಿ ಕೆಲವೇ ದಿನಗಳಲ್ಲಿ ಭ್ರಮನಿರಸನವನ್ನು ಉಂಟು ಮಾಡಲು ಪ್ರಾರಂಭಿಸಿತು. ಇದೆಂಥ ಮಳೆ, ದರಿದ್ರ ಮಳೆ, ನಿಲ್ಲೋದು ಯಾವಾಗ? ಇದು ಮಳೇನಾ? ಇವತ್ತೂ ಮಳೇನಾ? ಅಂತೆಲ್ಲ ಶಾಪ ಹಾಕಲಾರಂಭಿಸಿದೆವು. ಹೊಸತರಲ್ಲಿ ಇದ್ದ ಖುಷಿ ಈಗ ಬದಲಾಗಿತ್ತು. ನಮಗೆ ಬಹು ಮುಖ್ಯವಾಗಿ ಮಳೆಯನ್ನು ಆಸ್ವಾದಿಸುವುದಕ್ಕಿಂತ ಅದು ಯಾವಾಗ ನಿಲ್ಲುತ್ತದೆ ಎಂದು ಕಾಯುವಂತಾಯಿತು. ಮಳೆ ನಿಂತ ಮೇಲೆ ಹೊರಗೆ ಹೋಗೋಣ, ಪಾನಿಪುರಿ ತಿನ್ನೋಣ ಅಥವಾ ಹೋಟೆಲಿಗೆ ಹೋಗೋಣ ಎನ್ನುವುದೆಲ್ಲ ತಿರುಕನ ಕನಸಾಗಿತ್ತು. ಏಕೆಂದರೆ ಮಳೆ ನಿಲ್ಲುತ್ತಲೇ ಇರಲಿಲ್ಲ. ಇಡೀ ದಿನ ಮುಗಿಲು ಹರಿದು ಬೀಳುವಂತಹ ಜಡಿಮಳೆ. ಜೊತೆಗೆ ಮಳೆಗೆ ಗೆಜ್ಜೆ ಕಟ್ಟಿದ್ದಾರೇನೋ ಎಂಬಂತೆ ಶಬ್ದ. 'ಧೋ...' ಎಂದು ಸುರಿಯಲಾರಂಭಿಸುವ ಮಳೆಗೆ